ಅಲ್ಲೇ ಮಡುಕಟ್ಟಿ ನಿಂತಿತು. "ಇನ್ನೂ ಏನು ಮಾಡ್ತಿದ್ದೀಯಾ?" ಎಂದು ಕೋಣೆಯ ಕಡೆ ನೋಡಿ ಅಮ್ಮನನ್ನು ಕರೆದರು ಅಪ್ಪ. ಕೆಲವು ಕ್ಷಣಗಳಲ್ಲಿ ಪಂಚೆ, ಟವಲ್, ವೀಳ್ಯ, ಅಡಿಕೆಯೊಂದಿಗೆ ಅಮ್ಮ ಜಗುಲಿಗೆ ಬಂದಳು. ಅದನ್ನು ತೆಗೆದು ತೊಟ್ಟಿಯವರಿಗೆ ಕೊಟ್ಟರು. ಅವರು ಬಗ್ಗಿ ನಮಸ್ಕಾರ ಮಾಡಿ ಅದನ್ನು ತೆಗೆದುಕೊಂಡರು. ಅವರ ಮುಖದಲ್ಲಿ ಯಾವ ಪ್ರಕಾಶವೂ ಇರಲಿಲ್ಲ. "ತಗೋ ಇದನ್ನೂ ಇಟ್ಟುಕೋ" ಎಂದು ಅಂಗಿಯ ಜೇಬಿನಿಂದ ಐದು ರೂಪಾಯಿಯ ನಾಲ್ಕು ನೋಟುಗಳನ್ನು ತೆಗೆದು ಕೊಟ್ಟರು.

"ಬೇಡ ಸ್ವಾಮಿ, ಇಷ್ಟೇ ಸಾಕ್ರೀ..." ಎಂದರು ತೊಟ್ಟಿಯವರು. ಅವರ ದನಿ ನಡುಗಿತು.

"ಹೇಳೋದನ್ನ ಕೇಳು. ಇಟ್ಕೋ. ದುಡ್ಡುಕಾಸು ನೆರವಾಗೋ ಹಾಗೆ ದಾಯಾದಿಗಳೂ ನೆರವಾಗಲ್ಲ... ಬರೋ ಲಕ್ಷ್ಮೀನಾ ಬೇಡಾಂತ ಹೇಳಬೇಡ. ತಗೋ..."

ತೊಟ್ಟಿಯವರು ಸಂಕೋಚದಿಂದ ಅದನ್ನು ತೆಗೆದುಕೊಂಡರು. ನಂತರ, ಬೇಲಿಯ ಕಡೆಯಿಂದ ಮತ್ತೆ ತೊಟ್ಟಿಯವರು ತೋಟಕ್ಕೆ ಹೋಗಿ, ತನ್ನ ಕಸುಬಿಗೆ ಸಂಬಂಧಪಟ್ಟ ಎಲ್ಲವನ್ನೂ ಬಾಚಿ ಗೋಣಿಚೀಲದೊಳಗೆ ಎತ್ತಿ ಹಾಕಿಕೊಂಡರು. ನಂತರ ಚೀಲವನ್ನು ಎತ್ತಿ ಬೆನ್ನಹಿಂದೆ ಹಾಕಿಕೊಂಡು ಒಂದೇ ನಿಮಿಷಕ್ಕೆ ಜಗುಲಿಯ ಹತ್ತಿರ ಬಂದುಬಿಟ್ಟರು. ಮತ್ತೆ ಅಮ್ಮನ ಬಳಿ "ಬರ್ತೀನಮ್ಮ" ಎಂದು ಬಗ್ಗಿ ನಮಸ್ಕಾರ ಮಾಡಿ ರಸ್ತೆಗೆ ಇಳಿದುಬಿಟ್ಟರು. ಅವರ ಕಣ್ಣುಗಳು ನನ್ನನ್ನು ಹುಡುಕಿ ಹಿಂತಿರುಗಿ ನೋಡಬಹುದು ಎಂದು ಆಸೆಯಿಂದ ಕಾಯುತ್ತಿದೆ. ಆದರೆ ಅವರು ತಿರುಗಿ ನೋಡದೆಯೇ ಹೋಗುತ್ತಿದ್ದರು. ದೇವಸ್ಥಾನದ ಗೋಡೆಯನ್ನು ದಾಟುವವರೆಗೆ ಅವರ ಬೆನ್ನು ಕಂಡಿತು. ಆ ತಿರುವಿನಲ್ಲಿ ಅವರು ಮರೆಯಾದರು. ಎದೆ ಭಾರದೊಂದಿಗೆ ನಾನು ಹಿಂತಿರುಗಿದಾಗ, ಅತ್ತೆಯರು, ಅಜ್ಜಿಯೂ ಗೋಡೆಯ ಪಕ್ಕ ಕಲ್ಲಿನಂತೆ ಗಟ್ಟಿಯಾಗಿ ನಿಂತು ನೋಡುತ್ತಿರುವುದನ್ನು ನೋಡಿದೆ.

## ಪಾವಣ್ಣನ್

'ಪಾವಣ್ಣನ್' ಎಂಬ ಹೆಸರಿನಲ್ಲಿ ಬರೆಯುವ ತಮಿಳು ಲೇಖಕ ಭಾಸ್ಕರ್ ತಮಿಳುನಾಡಿನ ವಿಳುಪ್ಪುರಮ್ ಜಿಲ್ಲೆಯ ವಳವನೂರ್ ಎಂಬ ಗ್ರಾಮದವರು. ಮೂರು ದಶಕಗಳಿಂದ ಕಥೆ, ಕಾದಂಬರಿ ಮತ್ತು ಕವನಗಳನ್ನು ಬರೆಯುತ್ತಿದ್ದಾರೆ. ಈವರೆಗೆ 17 ಸಣ್ಣಕಥಾಸಂಕಲನ, ಮೂರು ಕಾದಂಬರಿ, ಎರಡು ಕಿರುಕಾದಂಬರಿ, 17 ಪ್ರಬಂಧ ಸಂಕಲನ, ಮೂರು ಕವನ ಸಂಕಲನ ಮತ್ತು ಮೂರು ಮಕ್ಕಳ ಕವಿತೆಗಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಬಿಎಸ್ಎನ್ಎಲ್‌ನಲ್ಲಿ ವಿಭಾಗೀಯ ಎಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ.

## ಕೆ. ನಲ್ಲತಂಬಿ

ತಮಿಳಿನಿಂದ ಕನ್ನಡಕ್ಕೆ ಹಾಗೂ ಕನ್ನಡದಿಂದ ತಮಿಳಿಗೆ ಅನೇಕ ಕತೆ, ಕವನಗಳನ್ನು ಅನುವಾದಿಸುತ್ತ ಬಂದಿರುವ ನಲ್ಲತಂಬಿ ಮೈಸೂರಿನವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಪಿ. ಲಂಕೇಶ್‌ರ 'ನೀಲು' ಕವಿತೆಗಳನ್ನು 'ಮೊಟ್ಟುವಿರಿಯುಮ್ ಸತ್ತಮ್' ಎಂಬ ಹೆಸರಿನಲ್ಲಿ ತಮಿಳು ಭಾಷೆಗೆ ಅನುವಾದಿಸಿದ್ದಾರೆ. ಛಾಯಾಗ್ರಹಣದಲ್ಲಿ ಹೆಚ್ಚಿನ ಆಸಕ್ತಿ. ಪೆರುಮಾಳ್ ಮುರುಗನ್, ಸುಂದರ ರಾಮಸ್ವಾಮಿ ಅವರ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.